ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ

ನ್ಯಾಯಾಲಯ, ಖಾನಾಪೂರ.

ಸಿ.ಸಿ. ನಂ: 1378/2018

ಕರ್ನಾಟಕ ಸರ್ಕಾರ ..ಪಿರ್ಯಾದಿ.

-:ವಿರುದ್ಧ:-

ಎ-1 ದೀಪಕ @ ರೋಹನ ತಂದೆ ನಾಗೇಂದ್ರ ಮಾತಂಗಿ

ಎ-2 ಶಿವನಾಗಯ್ಯಾ ಮುತ್ತಯ್ಯಾ ಉಮಚಗಿಮಠ ..ಆರೋಪಿತರು.

## ದೋಷಾರೋಪಣೆ

ನಾನು ಶ್ರೀ ಮಲ್ಲಿಕಾರ್ಜುನ. ಆರ್.ಎಂ. ಎಲ್.ಎಲ್.ಎಂ. C/c ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ ಮೇಲ್ಕಾಣಿಸಿದ ಆರೋಪಿತರ ಮೇಲೆ ಹೊರೆಸುವ ದೋಷಾರೋಪಣೆ ಏನೆಂದರೆ:

ದಿನಾಂಕ: 29.10.2017 ಬೆಳಗಿನ 03:30 ಗಂಟೆಗೆ ಖಾನಾಪೂರ ಪೊಲೀಸ ಠಾಣೆ ವ್ಯಾಪ್ತಿಯಲ್ಲಿ ಬರುವ ಖಾನಾಪೂರ ಪಟ್ಟಣದ ವಾಗಳೆ ಗಲ್ಲಿಯ ಚಾ.ಸಾ-1 ರವರು ಮನೆಗೆ ಕಿಲಿ ಹಾಕಿದಾಗ, ಅವರ ಮನೆಗೆ ಆರೋಪಿರಿಬ್ಬರೂ ಕೂಡಿಕೊಂಡು ಅವರು ವಾಸವಿರುವ ಮನೆಗೆ ಕಬ್ಬಿಣದ ರಾಡ, ಕೆಂಪು ಬಣ್ಣದ ಪಕ್ಕಡ, ಹಾಗೂ ಸ್ಕ್ರೂಡ್ರೈವರಗಳನ್ನು ತೆಗೆದುಕೊಂಡು ಹೋಗಿ ಚಾ.ಸಾ-1 ರವರ ಮನೆಯ ಮುಂದಿನ ಬಾಗಿಲ ಕಿಲಿಯನ್ನು ಕಟ್ ಮಾಡಿ ತೆಗೆದು ಒಳಗೆ ಪ್ರವೇಶ ಮಾಡಿ, ಈ ಮೂಲಕ ಭಾ.ದಂ.ಸಂ. ಕಲಂ. 380 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ತಿಳಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು, ಚಾ.ಸಾ-1 ರವರ ಮನೆಗೆ ಒಳಗೆ ಹೋಗಿ ದೇವರ ಜಗಲಿ ಮೇಲೆ ಇದ್ದ ಸ್ಟೀಲಿನ ಡಬ್ಬಿಯಲ್ಲಿದ್ದ 05 ಗ್ರಾಂ ತೂಕದ ಬಂಗಾರದ ಚೈನ ಹಾಗೂ ಚಿಲ್ಲರೆ 400 ರೂಪಾಯಿ ಹಣವನ್ನು ಕಳ್ಳತನ ಮಾಡಿಕೊಡಯಿ ಇಬ್ಬರೂ ಹಂಚಿಕೊಂಡು, ಈ ಮೂಲಕ ಭಾ.ದಂ.ಸಂ. ಕಲಂ. 457 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ.

ಪ್ರಶ್ನೆ: ಈಗ ಓದಿ ಹೇಳಿದ ಅಪಾದನೆ ಅರ್ಥವಾಗಿದೆಯೇ?

ಉತ್ತರ: ಅರ್ಥವಾಗಿದೆ

ಪ್ರಶ್ನೆ: ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ? ಅಥವಾ ನಿಮ್ಮ ಪರ ವಿಚಾರಣೆ ಏನಾದರೂ ಇದೆಯಾ?

ಉತ್ತರ: ಒಪ್ಪಿಕೊಳ್ಳುವುದಿಲ್ಲ ವಿಚಾರಣೆ ಬೇಕಾಗಿದೆ

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಲಾಯಿತು. ಅದನ್ನು ಅವರು ತಿಳಿದು ಅದರ ಉತ್ತರಗಳನ್ನು ಅವರ ಶಬ್ದಗಳಲ್ಲಿ ನಮೂದಿಸಲಾಯಿತು)

(ಮಲ್ಲಿಕಾರ್ಜುನ ಆರ್. ಎಂ.)

C/c ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

ಖಾನಾಪೂರ.

ಖಾನಾಪೂರ

ದಿನಾಂಕ: 24.10.2019